ದಿನಾಂಕ 05-02-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿ ಶ್ರೀ ಎ. ಕೆ. ಪಿ ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿರುತ್ತೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದನ್ನು ನಾನು ನೀಡಿರುವ ಮಾಹಿತಿ ಮೇರೆಗೆ ತಯಾರಿಸಿದ್ದು, ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ನನ್ನ ಅರ್ಜಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-1 | ಪ್ರಥಮ ಮಾಹಿತಿಯ ಯಥಾಪ್ರತಿ |
| ನಿಪಿ-2 | ಎಫ್.ಐ.ಆರ್ ನ ಯಥಾಪ್ರತಿ |
| ನಿಪಿ-3 | ಸ್ಥಳ ಪಂಚನಾಮೆಯ ಯಥಾಪ್ರತಿ |
| ನಿಪಿ-4 | ಕಚ್ಚಾ ನಕ್ಷೆಯ ಯಥಾಪ್ರತಿ |
| ನಿಪಿ-5 | ಐ.ಎಂ.ವಿ. ವರದಿಯ ಯಥಾಪ್ರತಿ |
| ನಿಪಿ-6 | ಗಾಯದ ಪ್ರಮಾಣ ಪತ್ರದ ಯಥಾಪ್ರತಿ |
| ನಿಪಿ-7 | ಎ. ಐ. ಆರ್ ವರದಿಯ ಯಥಾಪ್ರತಿ |
| ನಿಪಿ-8 | ಅಂತಿಮ ವರದಿಯ ಯಥಾಪ್ರತಿ |

| | |
|---|---|
| ನಿಪಿ-9 | ವೈದ್ಯಕೀಯ ಬಿಲ್ಲುಗಳು ಒಟ್ಟು 9 |
| ನಿಪಿ-10 | ಔಷಧಿ ಸಲಹಾ ಚೀಟಿ 1 |
| ನಿಪಿ-11 | ಪೇ ಸ್ಲಿಪ್ |
| ನಿಪಿ-12 | ನೋಟರೀಯವರಿಂದ ದೃಡೀಕರಿಸಲಾದ ಆಧಾರ್ ಕಾರ್ಡ್ |
| ನಿಪಿ-13 | ನೋಟರೀಯವರಿಂದ ದೃಡೀಕರಿಸಲಾದ ಪಾನ್ ಕಾರ್ಡ್ |

ನಿಪಿ 11ನ್ನು ಎರಡನೇ ಎದುರುದಾರರ ಗೌರವಾನ್ವಿತ ವಕೀಲರ ತಕರಾರಿಗೆ ಮತ್ತು ರುಜುವಾತಿನ ಶರತ್ತಿಗೆ ಒಳಪಟ್ಟು ಗುರುತಿಸಲಾಯಿತು.

ನಿಪಿ 12 ಮತ್ತು 13 ದಾಖಲೆಯ ಮೂಲಪ್ರತಿಯನ್ನು ಪಡೆದು ಹೋಲಿಕೆ ಮಾಡಿ ಮೂಲಪ್ರತಿಯನ್ನು ಹಿಂತಿರುಗಿಸಲಾಯಿತು. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಿ ಆದೇಶ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಈ ಹಂತದಲ್ಲಿ ಪಾಟೀ ಸವಾಲಿಗೆ ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ..ಹಿ.ಸಿ.ನ್ಯಾ ಉಡುಪಿ.